ವಿಷಯ : ವರಾಹ ನೀರಾವರಿ ಯೋಜನೆಯ ಕುರಿತು

ಪ್ರಶ್ನೆ ಸಂಖ್ಯೆ 682 (7108) ಶ್ರೀ ಅಪ್ಪಣ್ಣ ಹೆಗ್ಡೆ (ಬೈಂದೂರು).–ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ವರಾಹ ನೀರಾವರಿ ಯೋಜನೆ ಅಂತಿಮವಾಗಿ ರೂಪುಗೊಂಡಿದೆಯೆ ;

ಆ. ಹಾಗಿದ್ದಲ್ಲಿ, ಯಾವಾಗ ಕಾರ್ಯ ಪ್ರಾರಂಭಿಸಲಾಗುವುದು ;

ಇ. ಸದರಿ ಯೋಜನೆಯಿಂದ ಮುಳುಗಡೆಯಾಗುವ ಕೃಷಿ ಭೂಮಿ ಹಾಗೂ ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು ;

ಈ. ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ನೆರವು ಸಿಗುವ ಸಂಭವವಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ಆಗಿದೆ.

ಆ. ಪುನರ್ ವಿಮರ್ಶಿಕ ವರಾಹ ಯೋಜನೆ (ಮೊದಲನೆ ಹಂತ) ಅಂದಾಜಿಗೆ ಆಡಳಿತ ಮಂಜೂರಾತಿಯಾದ ಕೂಡಲೇ ಕಾರ್ಯ ಪ್ರಾರಂಭಿಸಲಾಗುವುದು.

ಇ. ವರಾಹ ಯೋಜನೆ ಮೊದಲನೆ ಹಂತದಲ್ಲಿ 350 ಎಕರೆಗಳಷ್ಟು ಕೃಷಿ ಭೂಮಿಯು ಮತ್ತು 1,157 ಎಕರೆಗಳಷ್ಟು ಅರಣ್ಯ ಭೂಮಿಯ ಮುಳುಗಡೆಯಾಗುವುದೆಂದು ಅಂದಾಜು ಮಾಡಲಾಗಿದೆ.

ಈ. ಇಲ್ಲ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್ ಕ್ಷೇತ್ರದಲ್ಲಿ ಸಮುದ್ರ ಕೊರೆತ ತಡೆಗಟ್ಟುವ ಬಗ್ಗೆ.

ಪ್ರಶ್ನೆ ಸಂಖ್ಯೆ 668 (1736) ಶ್ರೀ ಎಂ. ಲೋಕಯ್ಯಶೆಟ್ಟಿ (ಸೂರತ್‌ಕಲ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್ ಕ್ಷೇತ್ರದಲ್ಲಿ ಸಮುದ್ರ ತೀರದಲ್ಲಿ ಕಳೆದ ಬಾರಿ ಸಮುದ್ರ ಕೊರೆತ ಆದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಬರುವ ಮಳೆಗಾಲದಲ್ಲಿ ಇನ್ನೂ ಹೆಚ್ಚಿನ ಕಡಲ ಕೊರೆತ ಆಗಿ ಜನರ ಆಸ್ತಿ ಮತ್ತು ಮನೆಗಳಿಗೆ ತುಂಬಾ ಹಾನಿ ಸಂಭವಿಸುವ ಸಂದರ್ಭ ಇರುವುದರಿಂದ ಈ ಭಾಗದಲ್ಲಿ ಖಾಯಂ ಆಗಿ ತಡೆ ದಂಡೆಗಳನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ. ಬಂದಿದೆ.

ಆ. ಈ ಪ್ರದೇಶದಲ್ಲಿ ಈಗಾಗಲೇ ತಾತ್ಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಖಾಯಂ ತಡೆಗೋಡೆ ಕಟ್ಟಲು ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆಂದು ಕಳುಹಿಸಲಾಗಿದೆ. ಅನುಮೋದನೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ : ಸಾರ್ವಜನಿಕರು ತಮ್ಮ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸಲು ಅನುಮತಿ.

ಪ್ರಶ್ನೆ ಸಂಖ್ಯೆ 671 (1554) ಶ್ರೀ ಕೆ. ಮಲ್ಲಪ್ಪ (ಹರಿಹರ).—ಮಾನ್ಯ ಅರಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ವನ ಸಂಪತ್ತನ್ನು ಹೆಚ್ಚಿಸಲು ಸರ್ಕಾರದವರು ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ;

ಆ. ಸಾರ್ವಜನಿಕರು ತಮ್ಮ ಸ್ವಂತ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸಲು ಅನುಮತಿ ಕೊಡಲಾಗುವುದೆ, ಹಾಗಿದ್ದಲ್ಲಿ ಯಾವ ಯಾವ ಜಾತಿಯ ಮರಗಳನ್ನು ಬೆಳೆಸಲು ಅನುಮತಿ ನೀಡಲಾಗುವುದು ;

ಇ. ವನ ಸಂಪತ್ತನ್ನು ಹೆಚ್ಚಿಸಲು ಸಾರ್ವಜನಿಕರು ಗಿಡಮರಗಳನ್ನು ಬೆಳೆಸಲು ಪ್ರೋತ್ಸಾಹವನ್ನು ನೀಡಲಾಗುವುದೇ, ಹಾಗಿದ್ದಲ್ಲಿ ಸಹಾಯಧನವನ್ನಾಗಲಿ ಅಥವಾ ಸಾಲವನ್ನಾಗಲಿ, ನೀಡಲಾಗುವುದೆ :

ಈ. ಈರೀತಿ ಸಾರ್ವಜನಿಕರು ಬೆಳೆಸಿದ ಗಿಡಮರಗಳನ್ನು ಯಾವ ಪರತ್ತುಗಳಿಲ್ಲದೆ ಮುಕ್ತವಾಗಿ ಮಾರಾಟಮಾಡಲು ಸರ್ಕಾರದವರು ಅನುಮತಿ ನೀಡುವರೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ. ರಾಜ್ಯದ ವನ ಸಂಪತ್ತನ್ನು ಹೆಚ್ಚಿಸಲು ಈ ಕೆಳಗೆ ನಮೂದಿಸಿದ ಗಿಡ ಮರಗಳನ್ನು ನೆಡುವ ಯೋಜನೆಗಳನ್ನು ಕೈಗೊಳ್ಳಲಾಗಿದೆ.

1. ಸಾಮಾಜಿಕ ಅರಣ್ಯಗಳನ್ನು ಬೆಳೆಸುವ ಯೋಜನೆಗಳು. ವರ್ಷಕ್ಕೆ ಸರಾಸರಿ 10,000 ಹೆಕ್ಟೇರುಗಳು.

2. ಮಣ್ಣಿನ ಸವಕಳಿಯನ್ನು ತಡೆಯುವ ಯೋಜನೆಗಳು, ವರ್ಷಕ್ಕೆ ಸರಾಸರಿ 1000 ಹೆಕ್ಟೇರುಗಳು.

3. ಎನ್. ಆರ್. ಇ. ಪಿ. ಡಿ. ಪಿ. ಎ. ಪಿ. ಆರ್. ಎಲ್. ಇ. ಜಿ. ಪಿ. ಮುಂತಾದ ಯೋಜನೆಗಳು. ವರ್ಷಕ್ಕೆ ಸರಾಸರಿ 1000 ಹೆಕ್ಟೇರುಗಳು.

4. ಅರಣ್ಯ ಅಭಿವೃದ್ಧಿ ಫಂಡ್ ಕೆಳಗೆ ಸರಾಸರಿ 1000 ಹೆಕ್ಟೇರುಗಳು.

ಆ. ಸಾರ್ವಜನಿಕರು ತಮ್ಮ ಸ್ವಂತ ಜಮೀನುಗಳಲ್ಲಿ ಗಿಡಮರಗಳನ್ನು ನೆಡಲು ಸರ್ಕಾರದವರ ಅನುಮತಿ ಬೇಕಾಗಿಲ್ಲ.

ಇ. ಸಾರ್ವಜನಿಕರಿಗೆ ಪುಕ್ಕಟೆಯಾಗಿ ಸಸಿಗಳನ್ನು ಕೊಡಲಾಗುವುದು. ಸಹಾಯಧನವನ್ನಾಗಲಿ, ಸಾಲವನ್ನಾಗಲಿ ನೀಡಲಾಗುವುದಿಲ್ಲ.

ಈ. ಗಂಧ ಬೀಟೆ ಮುಂತಾದ ಇತರ ಕಾಯ್ದಿಟ್ಟ ಜಾತಿ ಮರಗಳನ್ನು ಬಿಟ್ಟು ಸಾರ್ವಜನಿಕರು ತಮ್ಮ ಜಮೀನುಗಳಲ್ಲಿ ಬೆಳೆಯಿಸಿದ ಮರಗಳನ್ನು ಮುಕ್ತವಾಗಿ ಮಾರಾಟ ಮಾಡಲು ಅನುಮತಿ ಕೊಡ ಲಾಗುವುದು.

Mr. Speaker.—Question hour is over.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

Sri A. Lakshmisagar (Minister for Law and Parly. Affairs).—Sir, I place written answers–44th list on the table of the House.

ವಿಷಯ : ಸಮಾಜ ಕಲ್ಯಾಣ ಇಲಾಖೆ ಆಶ್ರಮ ಶಾಲೆ ಮತ್ತು ವಸತಿ ಗೃಹದ ನೌಕರರ ಸಮಸ್ಯೆ ಕುರಿತು

ಪ್ರ. ಸಂಖ್ಯೆ 555 (1283) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವವರೆ ?

ಅ) ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆ ಹಾಗೂ ವಸತಿ ಗೃಹದಲ್ಲಿ ಯಾವ್ಯಾವ ದರ್ಜೆಯ ನೌಕರರಿದ್ದಾರೆ. ಹಾಗೂ ಅವರ ಸಂಖ್ಯೆ ಎಷ್ಟು ;

ಆ) ಇದರಲ್ಲಿ ಖಾಯಂ ಹಾಗೂ ದಿನಗೂಲಿ ನೌಕರರ ಸಂಖ್ಯೆ ಎಷ್ಟು ;

ಇ) ದಿನಗೂಲಿ ನೌಕರರಿಗೆ ಸಲ್ಲುತ್ತಿರುವ ಸಂಬಳವೆಷ್ಟು ?

ಶ್ರೀಮತಿ ಚಂದ್ರಪ್ರಭಾ ಅರಸ್ : (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವೆ).—

ಅ) ಈ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆ ಹಾಗೂ ವಸತಿ ಗೃಹದಲ್ಲಿ ಮೂರನೇ ಹಾಗೂ ನಾಲ್ಕನೇ ದರ್ಜೆಯ ನೌಕರರಿದ್ದಾರೆ. ಅವರ ಸಂಖ್ಯೆ—5043.

ಆ) ಇವರಲ್ಲಿ ಖಾಯಂ ನೌಕರರ ಸಂಖ್ಯೆ—4332 ದಿನಗೂಲಿ ನೌಕರರ ಸಂಖ್ಯೆ—711.

ಇ) ದಿನಗೂಲಿ ನೌಕರರಿಗೆ ಸುಮಾರು ರೂ. 5ರಿಂದ ರೂ. 14ರವರೆಗೆ ಕೊಡಲಾಗುತ್ತದೆ.

ವಿಷಯ : ರಾಜೋಲಿಬಂಡಾ ಡೈವರ್ಷನ್ ಕಾಲುವೆ

ಪ್ರ. ಸಂಖ್ಯೆ 556 (1152) ಶ್ರೀ ಪಿ. ರಾಮಚಂದ್ರ ರಾವ್.—(ಉಳ್ಳಾಳ್) ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು) ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜೋಲಿಬಂಡಾ ಡೈವರ್ಷನ್ ಕಾಲುವೆ ರಾಯಚೂರು ತಾಲ್ಲೂಕಿಗೆ ಕೇವಲ 12 ಕಿ.ಮಿ. ದೂರದಲ್ಲಿರುವ ರಾಜೋಲಿಂಬಂಡಾದ ಗ್ರಾಮದ ಹತ್ತಿರದಿಂದ ಡೈವರ್ಷನ್ ಕಾಲುವೆ ತೆಗೆಯುವ ಬಗ್ಗೆ ರೈತರು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಈ ಡೈವರ್ಷನ್ ಕಾಲುವೆಗೆ ಆಗುವ ಅಂದಾಜು ವೆಚ್ಚ ಎಷ್ಟು ? ಮತ್ತು ಇದರಿಂದ ನೀರಾವರಿ ಆಗುವ ಜಮೀನಿನ ವಿಸ್ತೀರ್ಣ ಎಷ್ಟು ;

ಇ) 1984–85ರ ಆರ್ಥಿಕ ವರ್ಷದಲ್ಲಿ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವುದೆಂಬ ಭಾವನೆಯನ್ನು ಸರ್ಕಾರವು ನೀಡುವುದೇ ;